ಕರ್ನಾಟಕ ಸರ್ಕಾರ

**(ಕೃಷಿ ಇಲಾಖೆ)**

ಸಂ:ಜ.ಕೃ.ನಿ/ಕೃ.ಯಾ/ಕೃ.ಆ/ಟಿಪ್ಪಣಿ/2/2018-19

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ:10-12-2018

ಇವರಿಗೆ:-

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು,
ಕೃಷಿ ಇಲಾಖೆ (ಎಲ್ಲಾ 29 ಜಿಲ್ಲೆಗಳು).

ವಿಷಯ:- ಕೃಷಿ ಯಾಂತ್ರೀಕರಣ ಯೋಜನೆಯಡಿ ಡಿಸೇಲ್ ಇಂಜೀನ್ ವಿತರಿಸುವ ಬಗ್ಗೆ.

ಉಲ್ಲೇಖ:- 1.ಈ ಕಛೇರಿ ಸುತ್ತೋಲೆ ಸಂಖ್ಯೆ:ಉಕೃನಿ/ಕೃ.ಯಾಂ.ಸೂ.ನೀ/ ಕೃಯಾಂ/ಅನುಷ್ಠಾನ/ ಸು/18-19, ದಿನಾಂಕ:17.05.2018

2.ಈ ಕಛೇರಿ ಸುತ್ತೋಲೆ ಸಂಖ್ಯೆ:ಉಕೃನಿ/ಕೃ.ಯಾಂ.ಸೂ.ನೀ/ಕೃಯಾಂ/ಅನುಷ್ಠಾನ/ ಸು/ 18-19, ದಿನಾಂಕ:28.07.2018

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸುತ್ತೋಲೆ ಯಲ್ಲಿ 2018-19ನೇ ಸಾಲಿನ ರಾಜ್ಯ ವಲಯ ಚಾಲ್ತಿ ಯೋಜನೆಯಡಿ ಕೃಷಿ ಪರಿಕರ ಮತ್ತು ಗುಣ ನಿಯಂತ್ರಣ (ಲೆ.ಶೀ:2401-00-103-0-15) ಯೋಜನೆಯಡಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮ ಅನುಷ್ಠಾನದ ಕುರಿತ ಮಾರ್ಗಸೂಚಿಯ ವಿಶೇಷ ಸೂಚನೆ:1. ರಲ್ಲಿ ***"ಡಿಸೇಲ್ ಪಂಪ್ ಸೆಟ್ ವರ್ಗದಡಿ ಪಂಪ್ ಸೆಟ್ ಗಳನ್ನು ಕೃಷಿ ಭಾಗ್ಯ ಫಲಾನುಭವಿಗಳಿಗೆ ಮಾತ್ರ ವಿತರಿಸತಕ್ಕದ್ದು"*** *ಎಂದು ಸೂಚಿಸಲಾಗಿತ್ತು.*

ಆದರೆ, ಸಾರ್ವಜನಿಕರು/ಜನಪ್ರತಿನಿಧಿಗಳಿಂದ ಈ ಕುರಿತು ಅನೇಕ ಮನವಿಗಳು ಸ್ವೀಕೃತವಾಗಿರುತ್ತದೆ ಹಾಗೂ ದಿನಾಂಕ:14.11.2018 ರಂದು ಕೃಷಿ ಆಯುಕ್ತರು ಕಲಬುರಗಿ ಜಿಲ್ಲೆಗೆ ಪ್ರವಾಸ ಕೈಗೊಂಡ ಸಂದರ್ಭದಲ್ಲೂ ಸಹ ಸದರಿ ವಿಷಯದ ಕುರಿತು ಚರ್ಚಿಸಲಾಗಿರುತ್ತದೆ.

ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ , **ಇನ್ನುಮುಂದೆ ಡಿಸೇಲ್ ಪಂಪ್ ಸೆಟ್ಟುಗಳನ್ನು ಕೃಷಿ ಭಾಗ್ಯೇತರ ಫಲಾನುಭವಿಗಳಿಗೂ ಸಹ ಕೃಷಿ ಯಾಂತ್ರೀಕರಣ ಯೋಜನೆಯಡಿ, ಈಗಾಗಲೆ ಉಲ್ಲೇಖ(2)ರ ಸುತ್ತೋಲೆಯಲ್ಲಿ ಜಿಲ್ಲೆಗಳಿಗೆ ನೀಡಲಾಗಿರುವ ವಾರ್ಷಿಕ ಅನುದಾನದ ಗುರಿಯೊಳಗೆ ಮಾರ್ಗಸೂಚಿಯಂತೆ ವಿತರಿಸಿ ವೆಚ್ಚ ಭರಿಸಲು ಅನುಮತಿ ನೀಡಲಾಗಿದೆ.**

**(ಟಿಪ್ಪಣಿ ಕೃಷಿ ಆಯುಕ್ತರಿಂದ ಅನುಮೋದನೆಗೊಂಡಿದೆ)**

ಸಹಿ/-

**ಕೃಷಿ ಆಯುಕ್ತರ ಪರವಾಗಿ**

ಪ್ರತಿಯನ್ನು:

1. ಶ್ರೀ.ರವೀಂದ್ರ ಶ್ರೀಕಂಠಯ್ಯ, ಮಾನ್ಯ ಶಾಸಕರು, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ, ಕೆಳಗಲಪೇಟೆ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.

ಕೃಷಿ ಆಯುಕ್ತರ ಪರವಾಗಿ 11/12

G:\R\Files\2018-19\5-Letters\Kannada Letters